ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 23-01-2019ರಂದು ಬೆಳಿಗ್ಗೆ 10:00 ಗಂಟೆಗೆ ಮೈಸೂರು ಜಿಲ್ಲಾ ಪಂಚಾಯತ್‌ನಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪ ಕಾರ್ಯದರ್ಶಿಗಳು(ಅಭಿವೃದ್ಧಿ), ಎಲ್ಲಾ ಅಧಿಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಎಲ್ಲಾ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಇವರೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭಾ ನಡವಳಿಗಳು.

ಹಾಜರಿದ್ದ ಅಧಿಕಾರಿಗಳು:

1. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
2. ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
3. ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
4. ಆಯುಕ್ತರು, ಎಂಜಿಎನ್‌ಆರ್‌ಇಜಿಎ., ಬೆಂಗಳೂರು.
5. ನಿರ್ದೇಶಕರು, ಪಂಚಾಯತ್ ರಾಜ್, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ಎಸ್‌ಐಆರ್‌ಡಿ., ಮೈಸೂರು.
7. ನಿರ್ದೇಶಕರು, ಗ್ರಾಮೀಣ ಮೂಲ ಸೌಲಭ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
8. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು.
9. ಮುಖ್ಯ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ.
10. ಮುಖ್ಯ ಅಭಿಯಂತರರು, ಕೆಆರ್‌ಐಡಿಎಲ್., ಬೆಂಗಳೂರು.
11. ನಿರ್ದೇಶಕರು, ಪಿಎಂಐ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.
12. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
13. ಎಲ್ಲಾ ಅಧೀಕ್ಷಕ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಹಾಗೂ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ.
14. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಉಪಕಾರ್ಯದರ್ಶಿಗಳು(ಅಭಿವೃದ್ಧಿ).
15. ಎಲ್ಲಾ ಜಿಲ್ಲೆಗಳ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಗಳ ಹಾಗೂ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರ್ಯಪಾಲಕ ಅಭಿಯಂತರರುಗಳು.

ಮೈಸೂರು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ಹಾಗೂ ನಿರ್ದೇಶಕರು ANSIRD ರವರು ಸಭೆಗೆ ಆಗಮಿಸಿದ್ದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಹಾಗೂ ಇಲಾಖೆಯ ಎಲ್ಲಾ ಹಿರಿಯ ಅಧಿಕಾರಿಗಳಿಗೆ ಸ್ವಾಗತ ಕೋರಿ, ಸಭೆ ನಡೆಸಿಕೊಡಲು ಅಧ್ಯಕ್ಷರನ್ನು ವಿನಂತಿಸಿದರು.

ನಾಡಗೀತೆಯೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯ ಪ್ರಾರಂಭಕ್ಕೆ ಮುನ್ನ ಇತ್ತೀಚಿಗೆ ಶಿವೈಕ್ಯರಾದ ಸಿದ್ಧಗಂಗಾ ಮಠದ ಪರಮಪೂಜ್ಯ ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರಿಗೆ ಒಂದು ನಿಮಿಷ ಮೌನ ಆಚರಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮಾನ್ಯ ಸಚಿವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಕಳೆದ 7-8 ತಿಂಗಳಲ್ಲಿ ಇಲಾಖಾ ಕಾರ್ಯಕ್ರಮಗಳಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದ್ದರೂ ಕೆಲವು ಜಿಲ್ಲೆಗಳಲ್ಲಿ ಕಾಮಗಾರಿಗಳು ಮಂದಗತಿಯಲ್ಲಿ ನಡೆಯುತ್ತಿದ್ದು ಬರಗಾಲದ ಪರಿಸ್ಥಿತಿಯನ್ನು ಎದುರಿಸಲು ಕುಡಿಯುವ ನೀರು ಮತ್ತು ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಗ್ರಾಮೀಣ ಜನರು ಗುಳೆ

ಹೋಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸಲು ಕರೆ ನೀಡಿದರು. MVS ಯೋಜನೆಗಳ ಅನುಷ್ಠಾನದಲ್ಲಿ ಅವೈಜ್ಞಾನಿಕವಾಗಿ ಯೋಜನೆ/ವಿನ್ಯಾಸ ರೂಪಿಸಿರುವ ಬಗ್ಗೆ, ತಾಂತ್ರಿಕ ದೋಷಗಳ ಬಗ್ಗೆ ಮಾನ್ಯ ಸಚಿವರು ವಿಷಾದ ವ್ಯಕ್ತಪಡಿಸಿದರು. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ (ರಾಯಚೂರು,ಶಿವಮೊಗ್ಗ,ಚಿಕ್ಕಮಗಳೂರು,ಧಾರವಾಡ,ಬಳ್ಳಾರಿ,ಕೊಪ್ಪಳ) ಅಧಿಕಾರಿಗಳು ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿನ ಆಡಳಿತಾತ್ಮಕ, ತಾಂತ್ರಿಕ ಸಮಸ್ಯೆಗಳ ಬಗ್ಗೆ ಪ್ರಸ್ಥಾಪಿಸಿದರು. ಉತ್ತಮ ಹಾಗೂ ಮಂದಗತಿ ಪ್ರಗತಿ ಬಗ್ಗೆ ಅಗತ್ಯವಿರುವೆಡೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ ಮುಖ್ಯ ಇಂಜಿನೀಯರುಗಳು, ಆಯುಕ್ತರು ಹಾಗೂ ನಿರ್ದೇಶಕರುಗಳು ಸ್ಪಷ್ಟೀಕರಣ ನೀಡಿದರು. ವಿವಿಧ ಯೋಜನೆಗಳಡಿ ಸಾಧಿಸಿರುವ ಜಿಲ್ಲಾವಾರು ಪ್ರಗತಿಯನ್ನು ಪರಿಶೀಲಿಸಿ ಕೆಳಕಂಡ ನಿರ್ಣಯಗಳನ್ನು ಕೈಗೊಂಡು ಮುಂದಿನ ಅನುಪಾಲನೆಗಾಗಿ ಸೂಚನೆಗಳನ್ನು ನೀಡಿದರು.

## ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ:

1. ರಾಜ್ಯದಲ್ಲಿ ಕುಡಿಯುವ ನೀರಿನ ಅನುಮೋದಿತ ಕ್ರಿಯಾ ಯೋಜನೆಯಂತೆ ಎಲ್ಲಾ ಕಾಮಗಾರಿಗಳನ್ನು ಹಾಗೂ ಮುಂದುವರೆದ ಕಾಮಗಾರಿಗಳನ್ನು ಮಾರ್ಚ್ ತಿಂಗಳೊಳಗಾಗಿ ಪೂರ್ಣಗೊಳಿಸುವುದು. ಈ ನಿಟ್ಟಿನಲ್ಲಿ ಶಿವಮೊಗ್ಗ, ಕೊಡಗು, ಉತ್ತರ ಕನ್ನಡ, ಕೊಪ್ಪಳ, ಉಡುಪಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪ್ರಗತಿ ಬಹಳಷ್ಟು ಕಡಿಮೆ ಇದ್ದು, ಗುರಿಸಾಧನೆಗೆ ಹೆಚ್ಚಿನ ಒತ್ತು ನೀಡುವುದು.
2. ಗ್ರಾಮೀಣ ನೀರು ಸರಬರಾಜು ಯೋಜನೆಯಡಿಯಲ್ಲಿ ಅನುಮೋದಿತ ಕ್ರಿಯಾ ಯೋಜನೆ ಪ್ರಕಾರ ಇನ್ನೂ ಅಂದಾಜು ಪಟ್ಟಿ ತಯಾರಿಕೆ, ಟೆಂಡರ್ ಪ್ರಕ್ರಿಯೆ, ಕಾರ್ಯಾದೇಶ ನೀಡುವಂತಹ ಆಡಳಿತಾತ್ಮಕ ಕೆಲಸಗಳಲ್ಲಿ ವಿಳಂಬವಾಗಿರುವ(ರಾಯಚೂರು,ಶಿವಮೊಗ್ಗ,ಚಿಕ್ಕಮಂಗಳೂರು,ಧಾರವಾಡ,ಬಳ್ಳಾರಿ,ಕೊಪ್ಪಳ) ಜಿಲ್ಲೆಗಳ ಮುಖ್ಯಸ್ಥರಿಗೆ ಎಚ್ಚರಿಕೆ ನೀಡಲಾಯಿತು. ಕಳೆದ ಸಭೆಗಳಲ್ಲೂ ಇಂತಹ ಆಧ್ಯತಾ ಕೆಲಸಗಳ ಬಗ್ಗೆ ಕಾಲಮಿತಿ ನೀಡಿರುವುದರಿಂದ, ಪುನಃ ಸಬೂಬು ಹೇಳಿ ಸಾರ್ವಜನಿಕ ಕೆಲಸಗಳ ಅನುಷ್ಠಾನದಲ್ಲಿ ಮತ್ತು ಬಿಲ್ ಪಾವತಿಯಲ್ಲಿ ವಿಳಂಬವಾಗಕೂಡದು.
3. ಅನುಮೋದಿತ ಕಾಮಗಾರಿಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡಲು ಸಾಧ್ಯವಾಗದಿದ್ದಲ್ಲಿ ಸದರಿ ಅನುದಾನವನ್ನು ಹಿಂಪಡೆದು ಅವಶ್ಯಕತೆಯಿರುವ ಜಿಲ್ಲೆಗಳಿಗೆ ಮರು ಹಂಚಿಕೆ ಮಾಡುವುದು.
4. ರೂ.5 ಲಕ್ಷಕ್ಕೂ ಮೇಲ್ಪಟ್ಟ ಕಾಮಗಾರಿಗಳಿಗೆ ಅಲ್ಪಾವದಿ ಟೆಂಡರ್ ಕರೆದು ಗುಣಮಟ್ಟದ ಕಾಮಗಾರಿಗಳ ಅನುಷ್ಠಾನಕ್ಕೆ ಕ್ರಮ ವಹಿಸಲು ಹಾಗೂ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡದ ಗುತ್ತಿಗೆದಾರರು ಲಭ್ಯವಾಗದಿದ್ದಲ್ಲಿ ಚಾಲ್ತಿ ಮಾರ್ಗಸೂಚಿಗಳನ್ವಯ ಸಾರ್ವಜನಿಕ ಹಿತಾಸಕ್ತಿ ಮೇರೆಗೆ ಅಭಿವೃದ್ಧಿ ಕಾಮಗಾರಿಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಲು ಕೊಳವೆಬಾವಿ ಕೊರೆಯುವಂತಹ ತುರ್ತು ಕಾಮಗಾರಿಗಳನ್ನು ಲಭ್ಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಗುತ್ತಿಗೆದಾರರು ಲಭ್ಯವಾಗದಿದ್ದಲ್ಲಿ ಇತರೆ ನೊಂದಾಯಿತ ಗುತ್ತಿಗೆದಾರರಿಗೆ ವಹಿಸಿ, ಸಿವಿಲ್ ಕಾಮಗಾರಿಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವರ್ಗದವರಿಗೆ ವಹಿಸಲು ಪರಿಶೀಲಿಸಿ, ಆಡಳಿತಾತ್ಮಕ ಹಿತಾದೃಷ್ಟಿಯಿಂದ ಕ್ರಮ ವಹಿಸಲು ತಿಳಿಸಲಾಯಿತು.
5. ಎಲ್ಲಾ ಜಿಲ್ಲೆಗಳಲ್ಲಿಯೂ ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡಗಳ ಗುತ್ತಿಗೆದಾರರ ಸಮಸ್ಯೆಗಳ ಬಗ್ಗೆ ಗುತ್ತಿಗೆದಾರರ ಸಂಘದವರ ಸಭೆ ಕರೆದು ಅವರುಗಳಿಗೆ ಅವಶ್ಯ ತರಬೇತಿ ನೀಡುವ ಮೂಲಕ ಗುತ್ತಿಗೆ

ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುವುದು. ಒಟ್ಟಾರೆ ಬಾಕಿ ಇರುವ ಕಾಮಗಾರಿಗಳಿಗೆ ದಿನಾಂಕ 04/02/2019 ರೊಳಗಾಗಿ ಕಾರ್ಯಾದೇಶ ನೀಡುವುದು. ನಿಗದಿತ ಸಮಯದೊಳಗೆ ಕ್ರಮ ವಹಿಸದಿದ್ದಲ್ಲಿ ಅನುಮೋದಿತ ಕಾಮಗಾರಿಗಳನ್ನು ರದ್ದುಪಡಿಸಲು ರಾಜ್ಯ ಮಟ್ಟದಲ್ಲಿ ಕ್ರಮ ವಹಿಸುವುದು.

6. ಇಲಾಖೆಯ ವಿವಿಧ ಯೋಜನೆಗಳಡಿ ಕಾಮಗಾರಿಗಳನ್ನು KRIDL ಗೆ ವಹಿಸಲಾಗಿರುವುದರಿಂದ ಜಿಲ್ಲಾ ಮಟ್ಟದ ಸಭೆಗಳಲ್ಲಿ KRIDL ನ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸಿ ಅವಶ್ಯ ಮಾಹಿತಿಯನ್ನು ಒದಗಿಸಬೇಕು. ಈ ಕುರಿತು ತಕ್ಷಣ ಸೂಕ್ತ ಆದೇಶ/ಸುತ್ತೋಲೆ ಹೊರಡಿಸಬೇಕು.

7. ಈಗಾಗಲೇ KRIDL ಗೆ ವಹಿಸಲಾದ ಕಾಮಗಾರಿಗಳು ಬಾಕಿ ಇದ್ದು ಇನ್ನೂ ಪ್ರಾರಂಭವಾಗದಿದ್ದಲ್ಲಿ ಅಂತಹ ಕಡೆ KRIDL ನಿಂದ ಹಣ ಹಿಂಪಡೆದು ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗಗಳಿಗೆ ನೀಡುವುದು.

8. ಬಹುಗ್ರಾಮ ಯೋಜನೆಗಳ ಅನುಷ್ಠಾನದಲ್ಲಿ, ಪರಿಷ್ಕೃತ (EIRL/WS) ಅಂದಾಜು, ವಿನ್ಯಾಸ ಬದಲಾವಣೆ (MVS) ಜಲಮೂಲದ (IR) ಸಮಸ್ಯೆಗಳ ಬಗ್ಗೆ ಸಮಗ್ರ ಹಾಗೂ ಕಾರ್ಯಸಿಂಧುತ್ವವಿರುವ ಯೋಜನೆಗಳನ್ನು ರೂಪಿಸುವಲ್ಲಿ ಆಗಿರುವ ಲೋಪಗಳ ಬಗ್ಗೆ ಮರು ಪರಿಶೀಲಿಸಿ, ಶೀಘ್ರವಾಗಿ, ಮುಂದುವರಿದಿರುವ ಯೋಜನೆಗಳನ್ನು ಕಾರ್ಯಗತಗೊಳಿಸಿ, ಸಾರ್ವಜನಿಕ ಉಪಯೋಗಕ್ಕೆ ಸಮರ್ಪಿಸಲು ವಿವೇಚನೆಯಿಂದ ನಿರ್ಧಾರ ಕೈಗೊಂಡು ಆರ್ಥಿಕ ವೆಚ್ಚಕ್ಕೆ ಪೂರಕವಾಗಿ ಭೌತಿಕ ಸಾಧನೆ ಪ್ರದರ್ಶಿಸಲು ಸೂಚಿಸಲಾಯಿತು.

9. ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ ಅನುಷ್ಠಾನಕ್ಕೆ ಹೆಚ್ಚುವರಿ ಅನುದಾನದ ಅವಶ್ಯಕತೆ ಇದ್ದಲ್ಲಿ ಅಧೀಕ್ಷಕ ಅಭಿಯಂತರರು ಹಾಗೂ ಕಾರ್ಯಪಾಲಕ ಅಭಿಯಂತರರು ಪ್ರಸ್ತಾವನೆ ಸಲ್ಲಿಸಿ ಮುಖ್ಯ ಅಭಿಯಂತರರು ಪರಿಶೀಲಿಸಿ ಕಳುಹಿಸಿದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಅನುದಾನ ಬಿಡುಗಡೆ ಮಾಡಬೇಕು.

10. ಬಹು ಗ್ರಾಮ ಯೋಜನೆಗಳ ನೀರು ಶೇಖರಣೆ/ಲಭ್ಯತೆ (IR) ಬಗ್ಗೆ ಬಳ್ಳಾರಿ, ತುಮಕೂರು, ವಿಜಾಪುರ ಜಿಲ್ಲೆಗಳ ತಾಂತ್ರಿಕ ಸಮಸ್ಯೆಗಳ ಬಗ್ಗೆ CE,RWS ತಾಂತ್ರಿಕ ಕಾರ್ಯಸಿಂಧುತ್ವದ ಪರಿಹಾರ ಒದಗಿಸಬೇಕು. ಇನ್ನು ಮುಂದೆ ನಾಲಾ ಬದಲು ರಿಸರ್ವಾಯರ್ ನಿಂದ ನೇರ ಜಲಮೂಲ ಆಧರಿಸಲು ಸೂಚಿಸಲಾಯಿತು.

11. ಟಾಸ್ಕ್ ಫೋರ್ಸ್ ಅಡಿ ಭೌತಿಕ ಪ್ರಗತಿ ತೀರ್ವಗೊಳಿಸಿ ತಕ್ಷಣ ಆರ್ಥಿಕ ಪ್ರಗತಿ ದಾಖಲಿಸಬೇಕು. ಕುಡಿಯುವ ನೀರಿನ ತುರ್ತು ಕಾಮಗಾರಿಗಳಿಗೆ ನೀಡಿರುವ ಅನುದಾನವನ್ನೂ ಸಹ ಜವಾಬ್ದಾರಿಯಿಂದ ಬಳಸದಿದ್ದಲ್ಲಿ, ವಾಸ್ತವಿಕವಾಗಿ ಸಮಸ್ಯೆಯಿಲ್ಲವೆಂದು ಪರಿಗಣಿಸಿ, ಅನುದಾನ ಹಿಂಪಡೆದು ಅಗತ್ಯವಿರುವೆಡೆ ಉಪಯೋಗಿಸಬೇಕು.

12. ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ಮಾಣ ಮಾಡಲು ಯಾವುದೇ ಸಮಸ್ಯೆ ಇಲ್ಲದ ಕಡೆ ಫೆಬ್ರವರಿ–2019 ಅಂತ್ಯದೊಳಗೆ ನಿರ್ಮಾಣ ಕಾರ್ಯ ಪೂರ್ಣಗೊಳ್ಳಬೇಕು.

ಜಾಗದ ಸಮಸ್ಯೆ ಇದ್ದಲ್ಲಿ ಅಧಿಕಾರಿಗಳು ಜಾಗ ಒದಗಿಸಿ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಒಂದು ದಿನಾಂಕವನ್ನು ನಿಗದಿ ಮಾಡಬೇಕು. ಜಾಗ ಲಭ್ಯವಾಗದಿದ್ದಲ್ಲಿ ಆ ಬಗ್ಗೆ ಫೆಬ್ರವರಿ 10ನೇ ತಾರೀಖಿನೊಳಗೆ ಸರ್ಕಾರಕ್ಕೆ ಮಾಹಿತಿ ನೀಡಬೇಕು.

ಜಲಮೂಲ ಸಮಸ್ಯೆ ಇದ್ದಲ್ಲಿ (ಬೋರ್‌ವೆಲ್‌ಗಳು ವಿಫಲಗೊಂಡ ಕಡೆ) ಸದರಿ ಘಟಕಗಳನ್ನು ಶಿಫ್ಟ್ ಮಾಡಲು ಒಂದು ದಿನಾಂಕ ನಿಗದಿಪಡಿಸಬೇಕು.

KRIDL ಇನ್ನೂ WPP ಸ್ಥಾಪನೆ ಕೆಲಸ ಪ್ರಾರಂಭಿಸದಿದ್ದಲ್ಲಿ ತಕ್ಷಣ ಹಂಚಿಕೆಯನ್ನು ವಾಪಸ್ ಪಡೆದು ಟೆಂಡರ್ ಮುಖೇನ ಅರ್ಹ ಗುತ್ತಿಗೆದಾರರಿಗೆ ವಹಿಸಲು ಸಂಬಂಧಿಸಿದ CEO ಗಳು ಗಮನಹರಿಸಬೇಕು.

13. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನಲ್ಲಿ 14 ಘಟಕಗಳನ್ನು ಅನುಮೋದನೆ ಪಡೆಯದೇ ಈ ಹಿಂದೆ ನಿರ್ಮಾಣ ಮಾಡಿದ್ದು, IMIS ನಲ್ಲಿ ಮಾಹಿತಿಗಳನ್ನು ಅಪ್ಲೋಡ್ ಮಾಡಲು ಸಾಧ್ಯವಾಗುವಂತೆ ಮುಂದಿನ ಹಂಚಿಕೆ ಸಂದರ್ಭದಲ್ಲಿ ಅಗತ್ಯತೆಯಾದರಿಸಿ ಸದರಿ ಘಟಕಗಳನ್ನು ಸೇರ್ಪಡಿಸಿಕೊಳ್ಳುವುದು.
14. EE ಮತ್ತು AEE ಗಳ ಕೊರತೆಯಿರುವೆಡೆ, ತಕ್ಷಣ ಆಡಳಿತಾತ್ಮಕವಾಗಿ ಪರಿಶೀಲಿಸಿ ನೇಮಕಾತಿ ಮಾಡಬೇಕು.
15. ಒಟ್ಟಾರೆ ಕುಡಿಯುವ ನೀರಿಗೆ ಸಾಕಷ್ಟು ಅನುದಾನದ ಲಭ್ಯತೆಯಿದ್ದು ಅನುದಾನದ ಪೂರ್ಣ ಬಳಕೆಗೆ ಆಯುಕ್ತರು, ಗ್ರಾ.ನೀ.ಸ ಕಾರ್ಯತಂತ್ರ ರೂಪಿಸಿ, ಅನುಪಾಲನೆ ಹಿಂಬಾಲಿಸಬೇಕು.

(ಕ್ರಮ: ಆಯುಕ್ತರು, ಗ್ರಾ.ನೀ.ಸ, ಎಲ್ಲಾ ಜಿಲ್ಲಾ ಪಂಚಾಯತ್ ಮು.ಕಾ.ನಿ ಗಳು ಹಾಗೂ ವ್ಯವಸ್ಥಾಪಕ ನಿರ್ದೇಶಕರು, KRIDL)

## ಸ್ವಚ್ಛ ಭಾರತ್ ಮಿಷನ್:

16. ಹೆಚ್ಚುವರಿ ಶೌಚಾಲಯಗಳ ಕಾಮಗಾರಿಯ ಕಾರ್ಯಾದೇಶವನ್ನು ಜನವರಿ 31 ರೊಳಗಾಗಿ ನೀಡುವುದು.
17. ಸ್ವಚ್ಛ ಭಾರತ (SBM) ಅಭಿಯಾನದಡಿ ಹಾಗೂ FTS ಪಾವತಿ ಹಾಗೂ IMIS ದಾಖಲೆ ಇಂಧೀಕರಣ ತುರ್ತಾಗಿ ಮಾಡುವುದು.
18. ಘನ ತಾಜ್ಯ ನಿರ್ವಹಣೆಯ ಬಗ್ಗೆ ಎನ್‌ಜಿಓ ಸಹಯೋಗ ಹಾಗೂ ಕಾರ್ಪೋರೇಟರ್ ಸಂಸ್ಥೆಗಳ ಸಮನ್ವಯದಲ್ಲಿ ತಾಂತ್ರಿಕ ಮತ್ತು ಆರ್ಥಿಕವಾಗಿ ಕಾರ್ಯಸಿಂಧುತ್ವವಿರುವ ಕಾಮಗಾರಿಗಳನ್ನು ಸಿಇಓಗಳು ವೈಯಕ್ತಿಕ ಆಸಕ್ತಿವಹಿಸಿ ಮಾದರಿ ಸಾಧನೆ ಮಾಡಿ ತೋರಿಸಲು ಮಾನ್ಯ ಸಚಿವರು ಹಾಗೂ ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಜಿಲ್ಲಾ ಪಂಚಾಯತ್ ಮುಖ್ಯಸ್ಥರುಗಳಿಗೆ ನಿರ್ದೇಶನ ನೀಡಿದರು. ಈ ದಿಸೆಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಕೈಗೊಂಡಿರುವ ಕ್ರಮವನ್ನು ಸಭೆಯಲ್ಲಿ ಮಾನ್ಯ ಸಚಿವರು ವಿಷದಪಡಿಸಿದರು.

(ಕ್ರಮ: ಆಯುಕ್ತರು, ಗ್ರಾ.ನೀ.ಸ, ಎಲ್ಲಾ ಜಿಲ್ಲಾ ಪಂಚಾಯತ್ ಮು.ಕಾ.ನಿ ಗಳು)

## ರಸ್ತೆ, ಸೇತುವೆ ಮತ್ತು ಕೆರೆಗಳು:

19. 2018-19 ನೇ ಸಾಲಿನಲ್ಲಿ 3054 ನಡಿ ಟಾಸ್ಕ್ ಫೋರ್ಸ್ ಅನುದಾನ ಹಂಚಿಕೆಯಾಗಿದ್ದರೂ ಇನ್ನೂ ಪೂರ್ಣ ಪ್ರಮಾಣದಲ್ಲಿ ಕ್ರಿಯಾ ಯೋಜನೆಯು ಅನುಮೋದನೆಯಾಗದಿರುವ ಬಗ್ಗೆ ಅಸಮಾಧಾನ

ವ್ಯಕ್ತವಾಯಿತು. ಈ ಬಗ್ಗೆ ತಕ್ಷಣ ಕಾರ್ಯ ಪ್ರವೃತ್ತರಾಗಿ ದಿನಾಂಕ 15/03/2019 ರೊಳಗೆ ಕಾಮಗಾರಿಗಳನ್ನು ಅನುಷ್ಠಾನಿಸಿ ಬಿಲ್ ಪಾವತಿಗೆ ಕ್ರಮ ವಹಿಸುವುದು. ಯಾವುದೇ ಕಾರಣಕ್ಕೂ ಮುಂದುವರೆದ ಕಾಮಗಾರಿಗೆ ಮುಂದಿನ ಸಾಲಿಗೆ ಅನುಮತಿ ನೀಡಲಾಗುವುದಿಲ್ಲ. ಆದ ಕಾರಣ ಅನುದಾನ ವ್ಯಪಗತವಾಗದಂತೆ ಎಚ್ಚರಿಕೆ ವಹಿಸುವುದು.

20. ಪೀಸ್‌ವರ್ಕ್ ಅನುಮೋದನೆಗೆ ಮುಖ್ಯ ಅಭಿಯಂತರರಿಗೆ ಕಳುಹಿಸುವ ಅವಶ್ಯಕತೆ ಇರುವುದಿಲ್ಲ. ಸಂಬಂಧಪಟ್ಟ ಅಧೀಕ್ಷಕ ಅಭಿಯಂತರರಿಂದ ಅನುಮೋದನೆ ಪಡೆದು ಚಾಲ್ತಿ ಮಾರ್ಗಸೂಚಿಗಳನ್ವಯ ಕಾಮಗಾರಿಗಳ ಅನುಷ್ಠಾನಕ್ಕೆ ಕ್ರಮ ವಹಿಸುವುದು.

21. ನಬಾರ್ಡ್ ಯೋಜನೆಯಡಿ ಹಂಚಿಕೆಯಾಗಿರುವ ರೂ.4946.00 ಲಕ್ಷಗಳಲ್ಲಿ ಕೇವಲ ರೂ.1387.00 ಲಕ್ಷಗಳು ಮಾತ್ರ ವೆಚ್ಚವಾಗಿದ್ದು ಪ್ರಗತಿಯನ್ನು ಉತ್ತಮ ಪಡಿಸುವುದು. ಇದಕ್ಕೆ ಪೂರಕವಾಗಿ ಮುಖ್ಯ ಅಭಿಯಂತರರ ಹಂತದಲ್ಲಿ ಸಭೆ ನಡೆಸಿ ಕಾಮಗಾರಿಗಳ ಕಾರ್ಯಾದೇಶ ನೀಡಲು ಬಾಕಿ ಇದ್ದಲ್ಲಿ 5ನೇ ಫೆಬ್ರವರಿ 2019 ರೊಳಗೆ ಕ್ರಮ ವಹಿಸಲು ಗಡುವು ನಿಗದಿಪಡಿಸುವುದು. ಮುಂದುವರೆದ ಕಾಮಗಾರಿಗಳ ಪೈಕಿ ಪೂರ್ಣಗೊಂಡಿರುವ ಕಾಮಗಾರಿಗಳ ಬಿಲ್ಲುಗಳ ಪಾವತಿಗೆ ಕ್ರಮ ವಹಿಸುವುದು.

**(ಕ್ರಮ:ನಿರ್ದೇಶಕರು, ಸುವರ್ಣ ಗ್ರಾಮೋದಯ,ಮುಖ್ಯ ಅಭಿಯಂತರರು PRED ಹಾಗೂ ಎಲ್ಲಾ ಜಿಲ್ಲಾ ಪಂಚಾಯತ್ ಮು.ಕಾ.ನಿ ಗಳು)**

<u>ನರೇಗಾ:</u>

22. ಪ್ರಸ್ತುತ ಸಾಲಿನಲ್ಲಿ 8.5 ಕೋಟಿ ಮಾನವ ದಿನಗಳು ಗುರಿಗೆದುರಾಗಿ 7.64 ಕೋಟಿ ಮಾನವ ದಿನಗಳ ಸೃಜನೆಯಾಗಿರುತ್ತದೆ. ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ಈ ಸಾಲಿನಲ್ಲಿ 10.55 ಕೋಟಿ ಮಾನವ ದಿನಗಳ ಪರಿಷ್ಕೃತ ಗುರಿಯನ್ನು ಹಮ್ಮಿಕೊಳ್ಳಲಾಗುತ್ತಿದ್ದು ಅದರಂತೆ ಮಾರ್ಚ್ 2019 ರೊಳಗಾಗಿ ಗುರಿ ಸಾಧಿಸಲು ಕ್ರಮ ವಹಿಸುವುದು.

23. 2019-20 ನೇ ಸಾಲಿಗೆ 12 ಕೋಟಿ ಮಾನವ ದಿನಗಳ ಸೃಜನೆ ಮಾಡಲು ಗುರಿ ಹೊಂದಿದ್ದು ಹಿಂದಿನ 3-4 ವರ್ಷಗಳ ಮಾಹಿತಿಯನ್ನು ಆಧಾರವಾಗಿಟ್ಟುಕೊಂಡು ನಿಗದಿತ ನಮೂನೆಯಲ್ಲಿ ಕಾರ್ಮಿಕ ಮುಂಗಡವನ್ನು ಸಿದ್ಧಪಡಿಸುವುದು. "ಜಲಾಮೃತ" ಹೊಸ ಯೋಜನೆಯ ಅನುಷ್ಠಾನಕ್ಕಾಗಿ ಆಸ್ತಿ ಸೃಜನೆಯಂತಹ ರಸ್ತೆ, ಶಾಲಾ ಕಾಂಪೌಂಡ್, ಶಾಲಾ ಶೌಚಾಲಯ, ಚೆಕ್ ಡ್ಯಾಮ್ ತೆಗೆದುಕೊಳ್ಳಲು ಯೋಜನೆ ತಯಾರಿಸುವುದು.

24. ನರೇಗಾ ಅಡಿಯಲ್ಲಿ ಕಾಮಗಾರಿಗಳ ಕಡತ ನಿರ್ವಹಣೆ ಸಮರ್ಪಕವಾಗಿಲ್ಲದಿರುವ ಬಗ್ಗೆ ದೂರುಗಳು ಬಂದಿದ್ದು, ಕಾಮಗಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಕಡತ ತೆರೆದು ಎನ್‌ಎಮ್‌ಆರ್, ಕಾಮಗಾರಿ ಮಾಡುವ ಮೊದಲು ಹಾಗೂ ನಂತರದ ಛಾಯಾಚಿತ್ರಗಳು, ಸ್ಥಳೀಯರಿಂದ ಕೆಲಸ ಮಾಡಿರುವ ಬಗ್ಗೆ ಮಾಹಿತಿ, ಕೂಲಿ ಪಾವತಿ ಮಾಡಿರುವ ಬಗ್ಗೆ ಮಾಹಿತಿ ನಿರ್ವಹಿಸುವುದು. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕಾ ಅಧಿಕಾರಿಗಳು ಹಾಗೂ ಉಪ ಕಾರ್ಯದರ್ಶಿ(ಅಭಿವೃದ್ಧಿ) ರವರು ಕ್ಷೇತ್ರಗಳಿಗೆ ಭೇಟಿ ನೀಡಿ ಕಾಮಗಾರಿಗಳನ್ನು ಪರಿಶೀಲಿಸುವುದು.

25. ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಕೃಷಿ ಇಲಾಖೆ ಹಾಗೂ ಇತರೆ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮುಂದಿನ ವರ್ಷದಲ್ಲಿ ಜಲಾನಯನ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಜಲಾಮೃತ

ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ ಚರ್ಚಿಸಲಾಗಿದೆ. ಅದರಂತೆ ಜಂಟಿ ಕೃಷಿ ನಿರ್ದೇಶಕರು ಜಲಾನಯನ ಅಧಿಕಾರಿಗಳ ಜೊತೆ ಚರ್ಚಿಸಿ ಅನುಷ್ಠಾನಗೊಳಿಸುವ ಬಗ್ಗೆ ಯೋಜನೆಯನ್ನು ರೂಪಿಸಬೇಕು. ಇದಕ್ಕೆ ಪೂರಕವಾಗಿ ಸಿವಿಲ್ ಇಂಜಿನೀಯರುಗಳನ್ನು ನೇಮಕ ಮಾಡುವ ಸಂದರ್ಭದಲ್ಲಿ ಬಿಎಸ್‌ಸಿ ಯಲ್ಲಿ ಕೃಷಿ ಮತ್ತು ತೋಟಗಾರಿಕೆ ವ್ಯಾಸಂಗ ಮಾಡಿರುವರನ್ನೂ ಸಹಾ ಪರಿಗಣಿಸಲು ಕ್ರಮವಹಿಸುವುದು.

26. ಬಹುಕಮಾನು ತಡೆಗೋಡೆ ಕಾಮಗಾರಿ ಜೊತೆಗೆ ಬದುನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಲ್ಲಿ 60:40 ಅನುಪಾತ ಸರಿದೂಗಿಸಬಹುದಾಗಿರುವುದರಿಂದ ಆ ರೀತಿ ಕ್ರಮ ವಹಿಸುವುದು.

27. ಅಂಗನವಾಡಿ ಕಾಮಗಾರಿಗಳು ಮುಂದುವರೆದ ಕಾಮಗಾರಿಗಳಾಗಿ ನಮೂದಾಗುತ್ತಿದ್ದು ಅವುಗಳನ್ನು ಪ್ರಸಕ್ತ ಆರ್ಥಿಕ ವರ್ಷದಲ್ಲಿಯೇ ಪೂರ್ಣಗೊಳಿಸುವುದು. ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದ ರೂ.3 ಲಕ್ಷಗಳ ಅನುದಾನದೊಂದಿಗೆ ನರೇಗಾ ಅಡಿ MORD ಮಾರ್ಗಸೂಚಿ ಪ್ರಕಾರ ರೂ.5 ಲಕ್ಷಗಳನ್ನು ಮಾತ್ರ ಬಳಸಿಕೊಳ್ಳಲು ಅವಕಾಶವಿದ್ದು ಅದರಂತೆ ಕ್ರಮ ವಹಿಸುವುದು.

28. ನರೇಗಾ ಯೋಜನೆಯಡಿ ಆಟದ ಮೈದಾನ, ಶಾಲಾ ಶೌಚಾಲಯ ಮತ್ತು ಶಾಲಾ ಕಾಂಪೌಂಡ್ ಕಾಮಗಾರಿಗಳನ್ನು ಈ ಮಾಹೆಯ ಅಂತ್ಯದೊಳಗೆ ಪೂರ್ಣಗೊಳಿಸುವುದು. ಕಾಂಪೌಂಡ್ ಕಾಮಗಾರಿ ಆಗಿರುವ ಕಡೆ **ಎಂಜಿಎನ್‌ಆರ್‌ಇಜಿಎ "ಸುಭದ್ರ ಶಾಲೆ"** ಎಂದು ಬರೆಸುವುದು. ದನದ ಕೊಟ್ಟಿಗೆ ನಿರ್ಮಾಣ ಮಾಡಿರುವ ಕಡೆ **ಎಂಜಿಎನ್‌ಆರ್‌ಇಜಿಎ "ಪಶು ಕುಠೀರ"** ಎಂದು ನಾಮಫಲಕ ಬರೆಸುವುದು.

29. 2019-20ನೇ ಸಾಲಿಗೆ 2 ಲಕ್ಷ ದನ ಕೊಟ್ಟಿಗೆ ನಿರ್ಮಾಣಕ್ಕೆ ಗುರಿ ನಿಗದಿಪಡಿಸುವುದು.

30. ಈ ಹಿಂದಿನ ಸಭೆಗಳಲ್ಲಿ ತಿಳಿಸಲಾದಂತೆ 2019-20ನೇ ಸಾಲಿನಲ್ಲಿ **"ಜಲಾಮೃತ"** ಯೋಜನೆಯನ್ನು ಅನುಷ್ಠಾನಗೊಳಿಸಲು ಜಲ ಸಾಕ್ಷರತೆ, ಜಲ ಸಂರಕ್ಷಣೆ, ಜಲ ಮಿತಬಳಕೆ, ಹಸಿರು ಹೊದಿಕೆ ಕಾಂಪೊನೆಂಟ್‌ಗಳಿಗೆ ಹೆಚ್ಚಿನ ಆದ್ಯತೆ ನೀಡುವುದು.

**(ಕ್ರಮ: ಆಯುಕ್ತರು, ಗ್ರಾಮೀಣಾಭಿವೃದ್ಧಿ, ಎಲ್ಲಾ ಜಿಲ್ಲಾ ಪಂಚಾಯತ್ ಮು.ಕಾ.ನಿ ಗಳು)**

<u>ಗ್ರಾಮ ವಿಕಾಸ:</u>

31. ಈಗ ಗ್ರಾಮ ವಿಕಾಸ ಯೋಜನೆಯಡಿ ಹಿಂದಿನ ಸುವರ್ಣ ಗ್ರಾಮೋದಯ ಯೋಜನೆಯಡಿ ಸಾಮಾಗ್ರಿ ಪಾವತಿಗೆ ಬಾಕಿಯಿರುವ ಅನುದಾನ ಬಿಡುಗಡೆಯಾಗುತ್ತಿದೆ. ಗ್ರಾಮ ವಿಕಾಸ ಯೋಜನೆಯಡಿ 939 ಕಾಮಗಾರಿಗಳಿಗೆ ಪೂರ್ಣ ಅನುದಾನ ಬಿಡುಗಡೆಯಾಗಿದ್ದು ಮಾರ್ಚ್ 2019 ರೊಳಗಾಗಿ ಸಂಪೂರ್ಣವಾಗಿ ಅನುದಾನವನ್ನು ವಿನಿಯೋಗಿಸುವುದು. ಮುಂದಿನ ಸಭೆಗೆ ಜಿಲ್ಲಾವಾರು ಕಾಮಗಾರಿ ಹಂತದ ವಿವರ ಹಾಗೂ ವೆಚ್ಚದ ವಿವರಗಳನ್ನು ಒದಗಿಸುವುದು ಹಾಗೂ ಏಪ್ರಿಲ್-2019ರಲ್ಲಿ ಹಣ ಬಳಕೆ ಪ್ರಮಾಣ (UC) ಪತ್ರ ಸಲ್ಲಿಸಬೇಕು.

(ಕ್ರಮ:ನಿರ್ದೇಶಕರು, ಸುವರ್ಣ ಗ್ರಾಮೋಧಯ)

ಪಂಚಾಯತ್ ರಾಜ್ ವಿಷಯಗಳು:

32. ಪ್ರತಿ ಸಭೆಯಲ್ಲಿಯೂ ತೆರಿಗೆ ವಸೂಲಾತಿಗೆ ಹೆಚ್ಚಿನ ಒತ್ತು ನೀಡಲು ತಿಳಿಸಲಾಗುತ್ತಿದೆ. ಆದಾಗ್ಯೂ ಗ್ರಾಮ ಪಂಚಾಯತಿಗಳಲ್ಲಿ ತೆರಿಗೆ ವಸೂಲಾತಿ ನಿಗದಿತ ಪ್ರಮಾಣದಲ್ಲಿ ಆಗುತ್ತಿಲ್ಲ. ಕರ ವಸೂಲಿಗಾರರು ಕಡ್ಡಾಯವಾಗಿ ಪ್ರತಿ ದಿನದ ವಸೂಲಾತಿಯ ಮೊತ್ತವನ್ನು ಬ್ಯಾಂಕ್‌ಗೆ ಜಮಾಮಾಡದೇ, ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸದೆ ತಾತ್ಕಾಲಿಕ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಪ್ರತಿದಿನ ವಸೂಲು ಮಾಡುವ ತೆರಿಗೆ ಹಣವನ್ನು ಪಂಚತಂತ್ರ ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸುವುದು.

33. ಮಾರ್ಗ ಸೂಚಿ ಪ್ರಕಾರ DCB ಪರಿಷ್ಕರಣೆ ಮಾಡಿ ವಸೂಲಾತಿಯ ಮಾಹಿತಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದು.

34. DCB ಸಮರ್ಪಕವಾಗಿ ವಸೂಲು ಮಾಡದವರ ವಿರುದ್ಧ ಕಠಿಣ ಶಿಸ್ತು ಕ್ರಮ ಜರುಗಿಸಿ ಸರ್ಕಾರಕ್ಕೆ ವರದಿ ಮಾಡುವುದು. ನಿರ್ದೇಶಕರು ಪಂ.ರಾಜ್-I ರವರು ಈ ಬಗ್ಗೆ ಪ್ರತಿ ತಿಂಗಳೂ ಪ್ರಗತಿ ಪರಿಶೀಲಿಸುವುದು.

35. DCB ಯ ವಸೂಲಾತಿಯನ್ನು ಪಂಚತಂತ್ರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವುದರಲ್ಲಿ ತಾಂತ್ರಿಕ ದೋಷ ಇದ್ದಲ್ಲಿ ಜಿಲ್ಲೆಗಳಲ್ಲಿ ಲಭ್ಯವಿರುವ DPMU ಅವರಿಂದ ತಾಂತ್ರಿಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು. ಹಾಸನ ಮತ್ತು ಕೋಲಾರ ಜಿಲ್ಲೆಯಲ್ಲಿ DPMU ಹುದ್ದೆ ಖಾಲಿಯಿದ್ದು, ಚಾಲ್ತಿ ಮಾರ್ಗಸೂಚಿಗಳನ್ವಯ ಭರ್ತಿ ಮಾಡಬೇಕು.

36. ಪ್ಲಾನ್ ಪ್ಲಸ್ ತಂತ್ರಾಂಶದಲ್ಲಿ ಈವರೆವಿಗೂ 2018-19ನೇ ಸಾಲಿನ 14ನೇ ಹಣಕಾಸು ಆಯೋಗದ ಕ್ರಿಯಾ ಯೋಜನೆಯನ್ನು ಕೇವಲ 4-5 ಜಿಲ್ಲಾ ಪಂಚಾಯತಿಗಳು ಶೇ.100 ರಷ್ಟು ಗುರಿ ಸಾಧಿಸಿದ್ದು ಇನ್ನುಳಿದ ಜಿಲ್ಲಾ ಪಂಚಾಯತಿಗಳಲ್ಲಿ ಬರುವ ಗ್ರಾಮ ಪಂಚಾಯತಿಗಳು ಈ ಮಾಹೆಯ ಅಂತ್ಯದೊಳಗೆ ಕಡ್ಡಾಯವಾಗಿ ಪ್ಲಾನ್ ಪ್ಲಸ್ ತಂತ್ರಾಂಶದಲ್ಲಿ ಅಳವಡಿಸುವುದು.

37. ಕೇಂದ್ರ ಸರ್ಕಾರದ ಸೂಚನೆಯಂತೆ ಇನ್ನು ಮುಂದೆ ಕಡ್ಡಾಯವಾಗಿ ಪ್ಲಾನ್ ಪ್ಲಸ್ ತಂತ್ರಾಂಶದಲ್ಲಿ ಅಳವಡಿಸಿರುವ ಕಾಮಗಾರಿಗಳನ್ನು ಮಾತ್ರ ಎಂ.ಜಿ.ಎನ್.ಆರ್.ಇ.ಜಿ.ಎ. ತಂತ್ರಾಂಶದಲ್ಲಿ ತೆಗೆದುಕೊಳ್ಳುವುದು.

38. ಬಾಪೂಜಿ ಸೇವಾ ಕೇಂದ್ರಗಳಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ನಾಡ ಕಛೇರಿಯ ಸೇವೆಗಳನ್ನು ನೀಡುವುದು.

39. ಗ್ರಾಮ ಪಂಚಾಯತಿ ಮಟ್ಟದಲ್ಲಿ RTC ನೀಡಲು ಕ್ರಮ ವಹಿಸುವುದು.

40. ಓ.ಟಿ.ಸಿ (ಜಾತಿ ಮತ್ತು ಆದಾಯ ಪ್ರಮಾಣ ಪತ್ರ) ಸೇವೆಯ ಬೇಡಿಕೆಯು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿದ್ದು, ಈ ಕುರಿತು ಗಮನಹರಿಸಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಸೇವೆಯನ್ನು ನೀಡುವುದು.. ಇ-ಸ್ವತ್ತುಗಳಿಗೆ ಮ್ಯಾಪಿಂಗ್ ಮಾಡಿ ಇ-ಸ್ವತ್ತುಗಳು ಎಲ್ಲೆಲ್ಲಿ ಇವೆ ಎಂದು ಗುರುತಿಸಬೇಕು ಹಾಗೂ ಈ ಸಂಬಂಧ ಎಷ್ಟು ಕಡೆ ವ್ಯವಹಾರ ಆಗಿದೆ ಎಂಬುದನ್ನೂ ಪರಿಶೀಲಿಸುವುದು.

41. ಗ್ರಾಮ ಪಂಚಾಯತಿಗಳ ಬೇಡಿಕೆ ಮತ್ತು ವಸೂಲಾತಿಯನ್ನು ತಂತ್ರಾಂಶದಲ್ಲಿ ಅಳವಡಿಸಲಾದ ಕುರಿತು ಮತ್ತು ಎಂ.ಜಿ.ಎನ್.ಆರ್.ಇ.ಜಿ.ಎ. ಪ್ರಗತಿಯನ್ನು ಪರಿಶೀಲಿಸಿ ಹಾಲಿ ಇರುವ ಡಾಟಾ ಎಂಟ್ರಿ ಆಪರೇಟರ್‌ರವರೊಂದಿಗೆ ಇನ್ನೊಬ್ಬ ಡಾಟಾ ಎಂಟ್ರಿ ಆಪರೇಟರ್ ನೀಡಲು ಕ್ರಮ ವಹಿಸುವುದು.

42. ಗ್ರಾಮ ಪಂಚಾಯತಿಗಳಲ್ಲಿ BSNL ಸಂಪರ್ಕ ಪಡೆಯಲಾಗಿದ್ದು, ಮೊಡೆಮ್ ಸ್ವಿಚ್ಆಫ್ ಮಾಡದಂತೆ ಗ್ರಾಮ ಪಂಚಾಯತಿ PDO ಗಳಿಗೆ ಎಚ್ಚರಿಕೆ ನೀಡುವುದು. BSNL ಸೇವೆಯಲ್ಲಿ ಸಮಸ್ಯೆಗಳಿದ್ದಲ್ಲಿ ತಾಂತ್ರಿಕ ಅಭಿಯಂತರರನ್ನು ಸಂಪರ್ಕಿಸಿ ಸರಿಪಡಿಸಿಕೊಳ್ಳುವುದು ಹಾಗೂ BSNL ಗೆ ಪಾವತಿಗೆ ಬಾಕಿ ಇದ್ದಲ್ಲಿ, ಪಾವತಿಗೆ ಕ್ರಮ ವಹಿಸುವುದು. ಈ ಹಿಂದೆ ನೀಡಿರುವ BSNL PLAN ನ್ನು ಬದಲಾವಣೆ ಮಾಡಿ ಹೊಸ PLAN ಅಳವಡಿಸಲು ಕ್ರಮ ವಹಿಸಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಇಂಟರ್‌ನೆಟ್ ಸೌಲಭ್ಯವನ್ನು ಒದಗಿಸುವುದು. ಗ್ರಾಮಪಂಚಾಯತಿಗಳಲ್ಲಿ ಇಂಟರ್‌ನೆಟ್ ಸೌಲಭ್ಯದ ಖಾತರಿಗಾಗಿ ಸರ್ಕಾರದಿಂದ ತಯಾರಿಸಲಾಗುತ್ತಿರುವ ಡ್ಯಾಶ್ ಬೋರ್ಡ್ ಅನುಸಾರ ಗ್ರಾಮ ಪಂಚಾಯತಿಗಳಲ್ಲಿ ಅಳವಡಿಕೆಗೆ ಕ್ರಮವಹಿಸುವುದು.

43. ಪಂಚತಂತ್ರ ತಂತ್ರಾಂಶದಲ್ಲಿ ಬೇಡಿಕೆಯನ್ನು ಅಳವಡಿಸಲು ತುಂಬಾ ಆಸ್ತಿಗಳು ಬಿಟ್ಟು ಹೋಗಿದ್ದು ಅದನ್ನು ಸೇರ್ಪಡೆ ಮಾಡಲು ಈಗಾಗಲೇ ತಂತ್ರಾಂಶದಲ್ಲಿ ಅವಕಾಶವನ್ನು ನೀಡಲಾಗಿದ್ದು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ದೃಢೀಕರಿಸಿ ಇ-ಸ್ವತ್ತು ತಂತ್ರಾಂಶದಲ್ಲಿ ಅಳವಡಿಸಲು ಕ್ರಮವಹಿಸುವುದು. ಇದು ಕೊನೆಯ ಅವಕಾಶವಾಗಿದ್ದು ದಿ:14-06-2013ರ ಮೊದಲು ಗ್ರಾಮ ಪಂಚಾಯತಿಯ ಡಿಮ್ಯಾಂಡ್ ವಹಿಯಲ್ಲಿದ್ದ ಆಸ್ತಿಗಳನ್ನು ಗ್ರಾಮ ಪಂಚಾಯತಿಯ ಪಿಡಿಓಗಳು ಪರಿಶೀಲಿಸಿ ಅಳವಡಿಸುವುದು.

44. ಇ-ಸ್ವತ್ತು ಮತ್ತು ತಂತ್ರಾಂಶಗಳ ಕುರಿತು ಯಾವುದಾದರೂ ಸಮಸ್ಯೆಯಿದ್ದಲ್ಲಿ ಜಿಲ್ಲೆಯಿಂದ ಮುಖ್ಯ ಅಂಶಗಳನ್ನು ಗುರುತಿಸಿ ಪತ್ರದ ಮೂಲಕ ಸರ್ಕಾರಕ್ಕೆ ಕಳುಹಿಸಿಕೊಟ್ಟಲ್ಲಿ ತಂತ್ರಾಂಶದಲ್ಲಿ ಮಾರ್ಪಾಡು ಮಾಡಲು ಅನುಕೂಲವಾಗುತ್ತದೆ. ಆದಕಾರಣ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಹಂತದಲ್ಲಿರುವ ತಾಂತ್ರಿಕ ಸಮಸ್ಯೆಗಳನ್ನು ಕ್ರೋಢೀಕರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು. ಈ ಕುರಿತು ತಂತ್ರಾಂಶದಲ್ಲಿ ಮಾರ್ಪಾಡು ಮಾಡಲು ಸರ್ಕಾರದಿಂದ ಆಯ್ಕೆಯಾದ 3-4 ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ತಾಂತ್ರಿಕವಾಗಿ ತಿಳಿದಿರುವಂತಹ ಸಹಾಯಕ ನಿರ್ದೇಶಕರುಗಳು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ ಕೂಡಲೇ ಸಮಸ್ಯೆ ಬಗೆಹರಿಸಲು ಕ್ರಮವಹಿಸುವುದು.

45. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ ವಿಚಾರದಲ್ಲಿ ಸರ್ಕಾರದಿಂದ ಮತ್ತೊಂದು ಸುತ್ತೋಲೆ ಕಳುಹಿಸುವವರೆಗೂ ಹೆಚ್ಚುವರಿ ಪಟ್ಟಿಯಲ್ಲಿರುವವರ ನೇಮಕಕ್ಕೆ ತಡೆ ಹಿಡಿಯುವುದು.

(ಕ್ರಮ:ನಿರ್ದೇಶಕರು, ಪಂಚಾಯತ್ ರಾಜ್-I, II, ನಿರ್ದೇಶಕರು, ಇ-ಆಡಳಿತ ಮತ್ತು ಎಲ್ಲಾ ಜಿಲ್ಲಾ ಪಂಚಾಯತ್ ಮು.ಕಾ.ನಿ ಗಳು)

46. 2019-20ನೇ ಆರ್ಥಿಕ ವರ್ಷಾಂತ್ಯ ಆಗುತ್ತಿದ್ದು ಒಟ್ಟಾರೆ ಶೇ.80ರಷ್ಟು ವೆಚ್ಚ ಆಗಿರುತ್ತದೆ. ಆದರೆ ಜಿಲ್ಲಾವಾರು ಪ್ರಗತಿ ನೋಡಿದಾಗ ವ್ಯತ್ಯಾಸ ಆಗುತ್ತಿದೆ. 3054, ನಬಾರ್ಡ್, ಎಸ್‌ಸಿಪಿ/ಟಿಎಸ್‌ಪಿ, ಎಸ್‌ಡಿಪಿ ಪ್ರಗತಿ ಬಹಳ ಕಡಿಮೆ ಇದೆ. ಈ ಬಗ್ಗೆ ಹೆಚ್ಚಿನ ಗಮನ ಹರಿಸಿ ಮಾರ್ಚ್ 15ರೊಳಗೆ ಪ್ರಗತಿ ಸಾಧಿಸಲು ಕ್ರಮವಾಗಬೇಕು. ಡಿಎಸ್‌ಎಸ್ ತಂತ್ರಾಂಶದಲ್ಲಿ ಮಾಹಿತಿಗಳನ್ನು ಅಪ್‌ಲೋಡ್ ಮಾಡುವ ಬಗ್ಗೆ ಅರೆ ಸರ್ಕಾರಿ ಪತ್ರ ಬರೆದಿದ್ದರೂ ಕ್ರಮ ಆಗಿಲ್ಲ. ಜಿಲ್ಲಾ ಪಂಚಾಯತ್ ಕಟ್ಟಡಗಳು, ಕುಡಿಯುವ ನೀರಿನ O & M ಬಾಬ್ತು ಮತ್ತಿತ್ತರ ಹಾಗೂ 15 ಲೆಕ್ಕ ಶೀರ್ಷಿಕೆಗಳಲ್ಲಿ ವೆಚ್ಚ ಕಡಿಮೆ ಆಗಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಇದನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಹಂತದಲ್ಲಿ ಪ್ರಗತಿ ಪರಿಶೀಲಿಸಿ ಮಾಹಿತಿಗಳನ್ನು 100% ಅಪ್‌ಡೇಟ್ ಮಾಡಿಸುವುದು.

47. <u>ಜಿ.ಪಿ.ಡಿ.ಪಿ.</u>

ಕೇಂದ್ರ ಸರ್ಕಾರದ ನಿರ್ದೇಶನದಂತೆ 2018-19 ಮತ್ತು 2019-20 ನೇ ಸಾಲಿನ 14ನೇ ಹಣಕಾಸು ಮತ್ತು ಎಂ.ಜಿ.ಎನ್.ಆರ್.ಜಿ.ಎ. ಎಲ್ಲಾ ಕಾಮಗಾರಿಗಳನ್ನು ಪ್ಲಾನ್ ಪ್ಲಸ್ ತಂತ್ರಾಂಶದಲ್ಲಿ ಅಳವಡಿಲು ಸೂಚಿಸಲಾಗಿದೆ. ಅದರಂತೆಯೇ 2018-19ನೇ ಸಾಲಿನ 14ನೇ ಹಣಕಾಸು ಆಯೋಗದ ಕ್ರಿಯಾ ಯೋಜನೆಯನ್ನು ಪ್ಲಾನ್ ಪ್ಲಸ್ ತಂತ್ರಾಂಶದಲ್ಲಿ ಅಳವಡಿಸಿದ ನಂತರವೇ ಜಿಲ್ಲಾಪಂಚಾಯತ್‌ನಲ್ಲಿ ಅನುಮೋದನೆ ನೀಡಿದ ನಂತರವೇ ಮುಂದಿನ ಕ್ರಮವಹಿಸುವುದು. ಒಟ್ಟಾರೆ ಪ್ಲಾನ್‌ಪ್ಲಸ್ ತಂತ್ರಾಂಶದಲ್ಲಿ ಈವರೆವಿಗೂ 2018-19ನೇ ಸಾಲಿನ 14ನೇ ಹಣಕಾಸು ಆಯೋಗದ ಕ್ರಿಯಾ ಯೋಜನೆಯನ್ನು ಕೇವಲ 4-5 ಜಿಲ್ಲಾ ಪಂಚಾಯತಿಗಳು ಶೇ.100 ರಷ್ಟು ಗುರಿ ಸಾಧಿಸಿದ್ದು ಇನ್ನುಳಿದ ಜಿಲ್ಲಾ ಪಂಚಾಯತಿಗಳಲ್ಲಿ ಬರುವ ಗ್ರಾಮಪಂಚಾಯತಿಗಳು ಈ ಮಾಹೆಯ ಅಂತ್ಯದೊಳಗೆ ಕಡ್ಡಾಯವಾಗಿ ಪ್ಲಾನ್ ಪ್ಲಸ್ ತಂತ್ರಾಂಶದಲ್ಲಿ ಅಳವಡಿಸುವುದು.

48. ಮುಂದುವರೆದು ಇನ್ನು ಮುಂದೆ ಎಂ.ಜಿ.ಎನ್.ಆರ್.ಜಿ.ಎ. ಯೋಜನೆಯಲ್ಲಿ ಯಾವುದೇ ಕಾಮಗಾರಿಗಳನ್ನು ತೆಗೆದುಕೊಳ್ಳುವ ಮೊದಲು ಕಡ್ಡಾಯವಾಗಿ ಪ್ಲಾನ್ ಪ್ಲಸ್ ತಂತ್ರಾಂಶದಲ್ಲಿ ಅಳವಡಿಸಿರುವ ಕಾಮಗಾರಿಗಳನ್ನು ಮಾತ್ರ ಎಂ.ಜಿ.ಎನ್.ಆರ್.ಜಿ.ಎ. ತಂತ್ರಾಂಶದಲ್ಲಿ ತೆಗೆದುಕೊಳ್ಳಲು ಮಾರ್ಪಾಡು ಮಾಡಿರುತ್ತಾರೆ. ಈ ಕುರಿತು ಈಗಾಗಲೇ ಕೇಂದ್ರ ಸರ್ಕಾರದಿಂದ ಪತ್ರ ಬರೆದಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿ ಎಲ್ಲಾ ಕಾಮಗಾರಿಗಳು ಮತ್ತು ಕ್ರಿಯಾ ಯೋಜನೆಗಳನ್ನು ಪ್ಲಾನ್‌ಪ್ಲಸ್ ತಂತ್ರಾಂಶದಲ್ಲಿ ಅಳವಡಿಸಲು ಸೂಚಿಸಿದೆ.

ಸಭೆಯ ಅಂತ್ಯದಲ್ಲಿ ಮಾನ್ಯ ಸಚಿವರು ಮಾತನಾಡಿ, ಒಟ್ಟಾರೆಯಾಗಿ ಆರ್ಥಿಕ ವರ್ಷ ಪೂರ್ಣಗೊಳ್ಳಲು ಇನ್ನು 2 ತಿಂಗಳು ಮಾತ್ರ ಬಾಕಿ ಉಳಿದಿದೆ. ಕುಡಿಯುವ ನೀರಿನ ಯೋಜನೆಗಳಿಗೆ ಬಿಡುಗಡೆಯಾಗಿರುವ ಅನುದಾನ ವೆಚ್ಚ ಆಗಬೇಕು. 3054 ಟಾಸ್ಕ್‌ಫೋರ್ಸ್ ಹಾಗೂ ಲಿಂಕ್ ಡಾಕ್ಯುಮೆಂಟ್ ಪ್ರಗತಿ ಕಡಿಮೆ ಇದ್ದು, ಬಿಡುಗಡೆಯಾಗಿರುವ ಅನುದಾನವನ್ನು ಬಳಸಿಕೊಂಡು ಕಾಮಗಾರಿಗಳನ್ನು ನಿರ್ವಹಿಸಿ ಪ್ರಗತಿ ಸಾಧಿಸಬೇಕು. ಕೆಲವು ಜಿಲ್ಲಾ ಪಂಚಾಯತ್‌ಗಳಲ್ಲಿ ಅಧಿಕಾರಿಗಳು ಎಚ್ಚೆತ್ತುಕೊಂಡು ಕೆಲಸ ಮಾಡುತ್ತಿದ್ದು, ಇನ್ನೂ ಕೆಲವರು ಹಾಗೆಯೇ ಇದ್ದಾರೆ. ಉದ್ಯೋಗ ಖಾತ್ರಿ ಯೋಜನೆಯಡಿ 2019-20ನೇ ಸಾಲಿಗೆ ಈಗಿನಿಂದಲೇ shelf of project ಮಾಡಿಕೊಳ್ಳಬೇಕು. ತೆರಿಗೆ ವಸೂಲಾತಿ ನಿಗಧಿತ ಪ್ರಮಾಣದಲ್ಲಿ ಆಗುತ್ತಿಲ್ಲ. ಅಲ್ಲದೆ ವಸೂಲಾಗಿರುವ ಮೊತ್ತದ ಮಾಹಿತಿಯನ್ನು

ಪಂಚತಂತ್ರ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುತ್ತಿಲ್ಲ. ಈ ಬಗ್ಗೆ ಗಮನ ಹರಿಸಿ ಕ್ರಮ ಆಗಬೇಕು. ಬಾಪೂಜಿ ಸೇವಾ ಕೇಂದ್ರಗಳಲ್ಲಿ ಇ-ಸ್ವತ್ತು ಆಗಬೇಕು. ಜಲಧಾರೆ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಬೇಕು. ಅಧಿಕಾರಿಗಳು ಜವಾಬ್ದಾರಿ ವಹಿಸಿ ಸಮರ್ಪಕವಾಗಿ ಕೆಲಸ ಮಾಡಬೇಕೆಂದು ಎಲ್ಲಾ ಅಧಿಕಾರಿಗಳಿಗೆ ತಿಳಿಸಲಾಯಿತು.

ಮೇಲ್ಕಂಡ ಎಲ್ಲಾ ಅಂಶಗಳ ಮೇಲೆ ಅಗತ್ಯ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ನಡವಳಿ ತಲುಪಿದ ಒಂದು ವಾರದೊಳಗೆ ಸಲ್ಲಿಸುವುದು.

ಎಸ್‌ಐಆರ್‌ಡಿ ನಿರ್ದೇಶಕರು, ಸಭೆಯ ಅಧ್ಯಕ್ಷತೆ ವಹಿಸಿ ಸವಿಸ್ತಾರವಾಗಿ ಪ್ರಗತಿ ಪರಿಶೀಲಿಸಿ ಅಗತ್ಯ ಸಲಹೆಗಳನ್ನು ನೀಡಿದ ಮಾನ್ಯ ಸಚಿವರಿಗೆ, ಪ್ರಧಾನ ಕಾರ್ಯದರ್ಶಿಗಳಿಗೆ, ಕಾರ್ಯದರ್ಶಿಗಳಿಗೆ, ಆಯುಕ್ತರಿಗೆ, ಮುಖ್ಯ ಅಭಿಯಂತರರುಗಳಿಗೆ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಾಗೂ ಇತರೆ ಅಧಿಕಾರಿಗಳಿಗೆ ವಂದಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಕೃಷ್ಣ ಬೈರೇಗೌಡ)
ಸಚಿವರು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸಂಖ್ಯೆ:ಗ್ರಾಅಪ/2/ಯೋಉಮಾ/2019 ದಿನಾಂಕ: 11/02/2019

ಇವರಿಗೆ,

1. ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
   **ಸಂಬಂಧಪಟ್ಟ ಆಯುಕ್ತರು/ನಿರ್ದೇಶಕರು ಜಿಲ್ಲೆಗಳಿಂದ ಅನುಪಾಲನಾ ವರದಿಯನ್ನು ಪಡೆದು ಕ್ರೋಢೀಕೃತ ವರದಿಯನ್ನು ಮುಂದಿನ ಸಭೆಗೆ ಸಲ್ಲಿಸುವುದು:**
2. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ.
3. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ.
4. ಅಭಿಯಾನ ನಿರ್ದೇಶಕರು, ಎನ್.ಆರ್.ಎಲ್.ಎಮ್
5. ನಿರ್ದೇಶಕರು, ಪಂಚಾಯತ್ ರಾಜ್– 1
6. ನಿರ್ದೇಶಕರು, ಪಂಚಾಯತ್ ರಾಜ್–2.
7. ನಿರ್ದೇಶಕರು, ಗ್ರಾ.ಮೂ.ಸೌ–2.
8. ನಿರ್ದೇಶಕರು, ಗ್ರಾಮ ವಿಕಾಸ.
9. ನಿರ್ದೇಶಕರು, ಇ–ಆಡಳಿತ.
10. ಆಂತರಿಕ ಆರ್ಥಿಕ ಸಲಹೆಗಾರರು.
11. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ.
12. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ.
13. ಮುಖ್ಯ ಇಂಜಿನಿಯರ್, ಪಂ.ರಾಜ್ ಇಂ.ಇಲಾಖೆ, ಬೆಂಗಳೂರು.
14. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ.

15. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮ, ಬೆಂಗಳೂರು.
16. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ.
17. ಕಾರ್ಯನಿರ್ವಾಹಕ ನಿರ್ದೇಶಕರು, ಎಂ.ಜಿ.ಐ.ಆರ್.ಇ.ಡಿ.
18. ಉಪ ಕಾರ್ಯದರ್ಶಿಗಳು, ಎಸ್.ಬಿ.ಎಂ.

<u>ಪ್ರತಿ ಮಾಹಿತಿಗಾಗಿ:</u>

1. ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.